# ಅನಾಥಾಶ್ರಮಗಳಲ್ಲಿನ ಮಕ್ಕಳ ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ: ಬೆಂಗಳೂರು ನಗರ ಜಿಲ್ಲೆಯನ್ನು ಅನುಲಕ್ಷಿಸಿ

**ಅಮರೇಶ್ ಎಸ್.*** & **ಸಿ. ಸೋಮಶೇಖರ್****

DOI: https://doi.org/10.5281/zenodo.20613730

**ABSTRACT**

ಪ್ರಸ್ತುತ ಅಧ್ಯಯನವು ಬೆಂಗಳೂರು ನಗರದಲ್ಲಿನ ಅನಾಥಾಶ್ರಮಗಳಲ್ಲಿನ ಮಕ್ಕಳ ಶೈಕ್ಷಣಿಕ ಸಮಸ್ಯೆಗಳನ್ನು ಗುರುತಿಸುವ ಉದ್ದೇಶದಿಂದ ಕೈಗೊಳ್ಳಲಾಗಿದೆ. ಬೆಳೆಯುತ್ತಿರುವ ಆಧುನಿಕತೆಯ ಸಾಮಾಜಿಕ ಪ್ರಕ್ರಿಯೆಯಲ್ಲಿ ಶಿಕ್ಷಣದ ಮಹತ್ವ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ಇಂತಹ ಶಿಕ್ಷಣವು ಪ್ರತಿಯೊಬ್ಬರಿಗೂ ಕೂಡ ಸಲ್ಲಬೇಕಾಗಿದೆ. ಅಂತಹ ಪ್ರಶ್ನೆಯನ್ನು ಕಂಡುಕೊಂಡು ಅಧ್ಯಯನವನ್ನು ಮಾಡಲಾಗಿದೆ. ಅನಾಥಾಶ್ರಮಗಳಲ್ಲಿನ ಮಕ್ಕಳು ಶೈಕ್ಷಣಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸಂಶೋಧನೆಯಿಂದ ಸ್ಪಷ್ಟವಾಗಿ ಕಂಡುಬಂದಿದೆ. ಬೆಂಗಳೂರಿನಲ್ಲಿ ಕಂಡುಬರುವ ಪ್ರತಿಯೊಂದು ಅನಾಥಾಶ್ರಮಗಳು ತನ್ನದೇ ಆದ ಸಮಸ್ಯೆಗಳಾದ ಆಹಾರದ ಸಮಸ್ಯೆ, ಉಡುಪಿನ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆಗಳು ಇತ್ಯಾದಿ ಸಮಸ್ಯೆಗಳಿಂದ ಬಳಲುತ್ತಿರುವುದು ಸಹಜವಾಗಿದೆ. ಆದರೆ ಬೆಂಗಳೂರಿನ ಅನಾಥಾಶ್ರಮಗಳಲ್ಲಿ ಜೀವಿಸುತ್ತಿರುವ ಮಕ್ಕಳು ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಒಂದು ರೀತಿಯ ವಿಪರ್ಯಾಸವಾಗಿದೆ ಎಂದರೆ ತಪ್ಪಾಗಲಾರದು. ಹಾಗಾಗಿ ಈ ಲೇಖನವು ಅನಾಥಾಶ್ರಮಗಳಲ್ಲಿ ಜೀವಿಸುತ್ತಿರುವ ಮಕ್ಕಳ ಶೈಕ್ಷಣಿಕ ಸಮಸ್ಯೆಗಳ ಕುರಿತಾದ ಶಿಫಾರಸುಗಳನ್ನು ಒಳಗೊಂಡಿದೆ.

**KEYWORDS:** ಅನಾಥಾಶ್ರಮಗಳು, ಶೈಕ್ಷಣಿಕ ಸಮಸ್ಯೆಗಳು, ಸಮಾಜಶಾಸ್ತ್ರೀಯ ಅಧ್ಯಯನ, ಬೆಂಗಳೂರು ನಗರ ಜಿಲ್ಲೆ, ಸುಧಾರಣಾ ಕ್ರಮಗಳು.

* **ಅಮರೇಶ್ ಎಸ್.,** ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

** **ಪ್ರೊ. ಸಿ. ಸೋಮಶೇಖರ್,** ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಪೀಠಿಕೆ:**

ಅನಾಥಾಶ್ರಮಗಳು ಸಾಮಾಜಿಕ ಪ್ರಕ್ರಿಯೆಯಲ್ಲಿ ಸಮಾಜ ಸೇವೆಯ ಒಂದು ಭಾಗವಾಗಿ ಕಾರ್ಯನಿರ್ವಹಿಸುತ್ತಿವೆ. ಇಂತಹ ಅನಾಥಾಶ್ರಮಗಳನ್ನು ನಾವು ಹಲವಾರು ವಿಧಗಳಾಗಿ ಕಾಣಬಹುದು. ಅಂಗವಿಕಲ ಅನಾಥಾಶ್ರಮಗಳು, ಬುದ್ಧಿಮಾಂದ್ಯ ಅನಾಥಾಶ್ರಮಗಳು, ಅಂಧ ಅನಾಥಾಶ್ರಮಗಳು, ವೃದ್ಧಾಶ್ರಮಗಳು, ಮಕ್ಕಳ ಅನಾಥಾಶ್ರಮಗಳು, ಮಹಿಳಾ ವಿಶೇಷ ಅನಾಥಾಶ್ರಮಗಳು ಇತ್ಯಾದಿ ಅನಾಥಾಶ್ರಮಗಳನ್ನು ಇಲ್ಲಿ ಕಾಣಬಹುದು. ಹೀಗೆ ತಿಳಿಸಿದ ಎಲ್ಲಾ ಅನಾಥಾಶ್ರಮಗಳಿಗಿಂತ ಮಕ್ಕಳ ಅನಾಥಾಶ್ರಮಗಳು ಇಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಕಾರಣ ಮಕ್ಕಳ ಅನಾಥಾಶ್ರಮಗಳು ಎಂದರೆ ಏನೂ ಅರಿಯದ ಇನ್ನೂ ಪ್ರಪಂಚದ ಜ್ಞಾನವನ್ನೇ ತಿಳಿಯದ ಮಕ್ಕಳು ಇಲ್ಲಿ ಜೀವಿಸುತ್ತಿರುತ್ತಾರೆ. ಇಂತಹ ಮಕ್ಕಳು ಹಲವಾರು ಕಾರಣಗಳಿಂದ, ಸಂದರ್ಭಗಳಿಂದ, ಸನ್ನಿವೇಶಗಳಿಂದ ಅನಾಥಾಶ್ರಮಗಳನ್ನು ಪ್ರವೇಶಿಸಿರುತ್ತಾರೆ. ಕೆಲವರು ಪೋಷಕರ ಆರ್ಥಿಕ ಸಂಕಷ್ಟದ ಪರಿಸ್ಥಿತಿಯಿಂದ, ಪೋಷಕರ ಮರಣದಿಂದ, ಕೌಟುಂಬಿಕ ಸಮಸ್ಯೆಗಳಿಂದ, ಒಂಟಿ ಪೋಷಕ ಪರಿಸ್ಥಿತಿಯಿಂದ ಸಾಂಕ್ರಾಮಿಕ ಕಾಯಿಲೆಗಳಿಂದ ಪೋಷಕರನ್ನು ಕಳೆದುಕೊಂಡಾಗ ಹೀಗೆ ಇತ್ಯಾದಿ ಕಾರಣಗಳಿಂದ ಚಿಕ್ಕವಯಸ್ಸಿನಿಂದಲೇ ಮಕ್ಕಳು ಅನಾಥಾಶ್ರಮಗಳನ್ನು ಸೇರುವ ಪ್ರಸಂಗ ಬಂದಿರುತ್ತದೆ. ಹೀಗೆ ಅನಾಥಾಶ್ರಮಗಳನ್ನು ಪ್ರವೇಶಿಸಿದ ಮಕ್ಕಳಿಗೆ ಏಕಾಏಕಿ ಶಿಕ್ಷಣಕ್ಕೆ ಪ್ರವೇಶ ಒದಗಿಸುವುದು ಸಾಮಾನ್ಯವಾದ ಕೆಲಸವಾಗಿರುವುದಿಲ್ಲ. ಇಂತಹ ಮಕ್ಕಳು ಅನಾಥಾಶ್ರಮಗಳನ್ನು ಪ್ರವೇಶಿಸುವಾಗ ಅವರ ಶೈಕ್ಷಣಿಕ ಮಟ್ಟವನ್ನು ಗುರುತಿಸುವುದೇ ಒಂದು ಸವಾಲಿನ ಕೆಲಸವಾಗಿರುತ್ತದೆ. ಅದರಲ್ಲಿಯೂ ಯಾರೂ ಇಲ್ಲದ ಮಕ್ಕಳಿಗೆ ಅವರ ವಯಸ್ಸಿನ ಅಂತರದಲ್ಲಿ ಶೈಕ್ಷಣಿಕ ಮಟ್ಟವನ್ನು ಗುರುತಿಸುವುದು ಕ್ಲಿಷ್ಟವಾಗಿರುತ್ತದೆ. ಬೆಂಗಳೂರಿನಲ್ಲಿ ಹಲವಾರು ಸರ್ಕಾರಿ ಅನಾಥಾಶ್ರಮಗಳು, ಅನುದಾನಿತ (ಎನ್.ಜಿ.ಓ) ಅನಾಥಾಶ್ರಮಗಳು, ಖಾಸಗಿ ಅನಾಥಾಶ್ರಮಗಳು ಕಂಡುಬಂದಿದ್ದು, ಅವುಗಳಲ್ಲಿ ಮಡಿಲು ಅನಾಥಾಶ್ರಮ, ಸಮರ್ಥನಮ್ ಅನಾಥಾಶ್ರಮ, ಫ್ಯೂಚರ್ ಇಂಡಿಯಾ, ಸ್ಪರ್ಶ ಚಾರಿಟೇಬಲ್ ಟ್ರಸ್ಟ್ ಎಂಬ ಇತ್ಯಾದಿ ಅನಾಥಾಶ್ರಮಗಳಿಗೆ ಭೇಟಿ ನೀಡಿದಾಗ ಅಲ್ಲಿನ ಮಕ್ಕಳು ಸರಾಸರಿ 6 ವರ್ಷದಿಂದ 16 ವರ್ಷದೊಳಗಿನ ಮಕ್ಕಳಾಗಿದ್ದು, ಅವರು ಹಲವಾರು ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಈ ಅಧ್ಯಯನದಿಂದ ಕಂಡುಬಂದಿದೆ. ಅಂತಹ ಶೈಕ್ಷಣಿಕ ಸಮಸ್ಯೆಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

ಅನಾಥ ಮಕ್ಕಳು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳು: ಅನಾಥಾಶ್ರಮಗಳಲ್ಲಿನ ಮಕ್ಕಳು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳು ಅತ್ಯಂತ ಗಂಭೀರವಾಗಿದ್ದು, ಅವರ ಭವಿಷ್ಯದ ಪ್ರಗತಿಗೆ ಮುಳ್ಳಾಗಿರುವುದನ್ನು ಕಾಣಬಹುದು. ಅವುಗಳೆಂದರೆ:

- ಅನಾಥಾಶ್ರಮಗಳಲ್ಲಿ ಮಕ್ಕಳು ಪ್ರವೇಶ ಪಡೆಯುವ ಸಂದರ್ಭಗಳಲ್ಲಿ ಅವರ ಶೈಕ್ಷಣಿಕ ಮಟ್ಟವನ್ನು ಅಂದರೆ ಅವರು ಅನಾಥಾಶ್ರಮವನ್ನು ಸೇರುವ ವೇಳೆ

ಯಾವ ತರಗತಿಯನ್ನು ಕಲಿಯುತ್ತಿದ್ದರು ಎಂಬುದನ್ನು ಗುರುತಿಸುವುದು ಒಂದು ಕಷ್ಟದ ಹಾದಿಯಾದರೆ, ಅದನ್ನು ಗುರುತಿಸಿ ಅವರ ದಾಖಲೆಗಳನ್ನು ಏರ್ಪಡಿಸಿ ಮುಂದಿನ ತರಗತಿಗೆ ಸೇರಿಸುವುದು ಅನಾಥಾಶ್ರಮಗಳ ಸಿಬ್ಬಂದಿಗೆ ಇದು ಸವಾಲಿನ ಕೆಲಸವಾಗಿರುವುದು ಕಂಡುಬಂದಿದೆ.

- ಅನಾಥಾಶ್ರಮಗಳಿಂದ ಮಕ್ಕಳು ಓದುವ ಪಾಠ ಶಾಲೆಗಳು ಬಹಳ ದೂರವಿರುವುದರಿಂದ ಮಕ್ಕಳಿಗೆ ಪ್ರಯಾಣ ಮಾಡುವುದು ಕಷ್ಟಕರವಾಗಿದೆ. ಎನ್.ಜಿ.ಓಗಳ ಅಡಿಯಲ್ಲಿ ನಡೆಸಲ್ಪಡುವ ಅನಾಥಾಶ್ರಮಗಳು ಅವರದ್ದೇ ಆದ ಶಾಲೆಗಳು ಹಾಗೂ ವಸತಿ ನಿಲಯಗಳು ಇರುವುದರಿಂದ ಅಂತಹ ಅನಾಥಾಶ್ರಮಗಳಲ್ಲಿ ಬೆಳೆಯುತ್ತಿರುವ ಮಕ್ಕಳಿಗೆ ಯಾವುದೇ ಸಮಸ್ಯೆಗಳು ಉಂಟಾಗುತ್ತಿಲ್ಲ. ಆದರೆ ಖಾಸಗಿ ಅನಾಥಾಶ್ರಮಗಳಲ್ಲಿ ಜೀವಿಸುತ್ತಿರುವ ಮಕ್ಕಳಿಗೆ ಇಂತಹ ಸಮಸ್ಯೆಗಳು ಎದುರಾಗಿರುವುದನ್ನು ಕಾಣಬಹುದು.
- ಈ ಅಧ್ಯಯನದಲ್ಲಿ ಮೇಲೆ ತಿಳಿಸಿದ ಕೆಲವು ಅನಾಥಾಶ್ರಮಗಳನ್ನು ಭೇಟಿ ನೀಡಿದಾಗ ಅವುಗಳಲ್ಲಿ ಮೂಲಭೂತ ಸೌಕರ್ಯ ಮತ್ತು ಕಲಿಕಾ ಸಾಮಗ್ರಿಗಳ ಕೊರತೆ ಎದ್ದು ಕಾಣುತ್ತಿತ್ತು, ಅದರಲ್ಲಿಯೂ ಕೆಲವೊಂದು ಬಡ ಖಾಸಗಿ ಮಕ್ಕಳ ಅನಾಥಾಶ್ರಮಗಳಲ್ಲಿ ಈ ಸಮಸ್ಯೆಗಳು ಬಿಗಡಾಯಿಸಿರುವುದು ಒಂದು ದುರಂತವೇ ಆಗಿದೆ. ಇಂತಹ ಆಶ್ರಮಗಳಲ್ಲಿ ಮಕ್ಕಳಿಗೆ ಅಗತ್ಯವಿರುವ ಪಠ್ಯಪುಸ್ತಕಗಳು, ನೋಟ್‌ಬುಕ್‌ಗಳು ಮತ್ತು ಬರವಣಿಗೆಯ ಸಾಮಗ್ರಿಗಳು ಸಮಯಕ್ಕೆ ಸರಿಯಾಗಿ ಸಿಗದೆ ಮಕ್ಕಳು ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಂಡಿರುವುದು ಕಂಡುಬಂದಿದೆ.
- ಅನಾಥ ಮಕ್ಕಳು ಶಾಲೆಯಿಂದ ಬಂದ ನಂತರ ಅವರಿಗೆ ಹೆಚ್ಚುವರಿ ಕಲಿಕೆಯ ಅವಕಾಶವಿಲ್ಲದಿರುವುದು ಅವರ ಕಲಿಕೆಗೆ ತೊಂದರೆಯಾಗುತ್ತಿರುವುದು ಕಂಡುಬಂದಿದೆ. ಕೆಲವೊಂದು ಆಶ್ರಮಗಳು ಮಕ್ಕಳು ಶಾಲೆಯಿಂದ ಬಂದ ನಂತರ ಸಂಜೆಯ ವೇಳೆಯಲ್ಲಿ ಟ್ಯೂಷನ್ ನಡೆಸುವ ಸೌಲಭ್ಯವನ್ನು ಹೊಂದಿವೆ. ಆದರೆ ಹೆಚ್ಚು ಆಶ್ರಮಗಳು ಈ ಟ್ಯೂಷನ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳದ ಕಾರಣ ಮಕ್ಕಳು ಶಾಲೆಯಲ್ಲಿ ಕಲಿತ ಪಾಠವನ್ನು ಮಾತ್ರ ಕಲಿಯುವ ಸಂದರ್ಭವಿದೆ.
- ಅನಾಥಾಶ್ರಮಗಳಲ್ಲಿ ಮಕ್ಕಳ ಮೇಲೆ ವೈಯಕ್ತಿಕ ಗಮನ ಮತ್ತು ಮಾರ್ಗದರ್ಶನದ ಕೊರತೆಯಿಂದಾಗಿ ಮಕ್ಕಳಿಗೆ ಪಾಠ ಹೇಳಿಕೊಡಲು ಅಥವಾ ಹೋಮ್‌ವರ್ಕ್ ಮಾಡಿಸಲು ತರಬೇತಿ ಪಡೆದ ಶಿಕ್ಷಕರು ಅಥವಾ ಸಿಬ್ಬಂದಿ ಇರುವುದಿಲ್ಲ. ಇದರಿಂದ ಮಕ್ಕಳಿಗೆ ಸರಿಯಾದ ಮಾರ್ಗದರ್ಶನವಿಲ್ಲದೆ ಶಿಕ್ಷಣದಲ್ಲಿ ಕುಂಠಿತವಾಗಿರುವುದನ್ನು ಕಾಣಬಹುದು.
- ಕೆಲವೊಂದು ಆಶ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಇರುವುದರಿಂದ

ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಕಡೆಗೆ ವೈಯಕ್ತಿಕವಾಗಿ ಗಮನ ಹರಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಹಿಂದುಳಿಯುತ್ತಲೇ ಇರುತ್ತಾರೆ.

- ಸಾಮಾನ್ಯ ಮಕ್ಕಳಂತೆ ಮನೆಯಲ್ಲಿ ತಂದೆ-ತಾಯಿ ನೀಡುವ ಶೈಕ್ಷಣಿಕ ಪ್ರೋತ್ಸಾಹ, ಪ್ರೀತಿ ಮತ್ತು ಕಾಳಜಿ ಅನಾಥಾಶ್ರಮಗಳಲ್ಲಿ ಇರುವ ಮಕ್ಕಳಿಗೆ ಸಿಗದೇ ಇರುವುದರಿಂದ ಮಕ್ಕಳಿಗೆ ಕಲಿಕೆಯಲ್ಲಿ ಅಥವಾ ಓದುವಿನಲ್ಲಿ ಆಸಕ್ತಿ ಕಡಿಮೆಯಾಗುತ್ತಿರುವುದು ಅಧ್ಯಯನದಿಂದ ತಿಳಿಯಲಾಗಿದೆ.
- ಅನಾಥಾಶ್ರಮಗಳಲ್ಲಿನ ಮಕ್ಕಳು ಶಾಲಾ ಶಿಕ್ಷಣದ ನಂತರ ಕಾಲೇಜು ಅಥವಾ ವೃತ್ತಿಪರ ಕೋರ್ಸ್‌ಗಳಿಗೆ ಸೇರಲು ಭಾರಿ ಪ್ರಮಾಣದ ಶುಲ್ಕದ ಅಗತ್ಯವಿರುವುದರಿಂದ ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದಾಗಿ ಅನಾಥಾಶ್ರಮಗಳು ಉನ್ನತ ಮಟ್ಟದ ಶಿಕ್ಷಣವನ್ನು ಬೆಂಬಲಿಸುವುದಿಲ್ಲ.
- ಇತರೆ ಸಾಮಾನ್ಯ ಮಕ್ಕಳಿಗೆ ಸಿಗುವಂತೆ ಇಂದಿನ ಸ್ಪರ್ಧಾತ್ಮಕ ಜಗತ್ತಿಗೆ ಬೇಕಾದ ಕಂಪ್ಯೂಟರ್ ಜ್ಞಾನ, ಸಂವಹನ ಕಲೆ ಮತ್ತು ಇಂಗ್ಲೀಷ್ ಭಾಷೆಯ ತರಬೇತಿಯಂತಹ ಹೆಚ್ಚಿನ ಜ್ಞಾನವನ್ನು ಇಂತಹ ಮಕ್ಕಳಲ್ಲಿ ನೋಡಲು ಸಾಧ್ಯವಿಲ್ಲ. ಆದರೆ ಬೆಂಗಳೂರಿನಲ್ಲಿ ಎನ್.ಜಿ.ಓ ಗಳಂತಹ ಅಡಿಯಲ್ಲಿ ಬರುವಂತಹ ಮಕ್ಕಳ ಅನಾಥಾಶ್ರಮಗಳಲ್ಲಿ ಇಂತಹ ಸೌಲಭ್ಯಗಳನ್ನು ಕಾಣಬಹುದು.
- ಅನಾಥಾಶ್ರಮಗಳಲ್ಲಿ ಇರುವ ಮಕ್ಕಳು ಶಾಲೆಗಳಲ್ಲಿ ಕಲಿಕೆಯಲ್ಲಿ ಇರುವಂತಹ ಸಂದರ್ಭದಲ್ಲಿ ಕೆಲವು ಸಾಮಾಜಿಕ ಸವಾಲುಗಳನ್ನು ಎದುರಿಸುತ್ತಾರೆ. ಅಂದರೆ ಶಾಲೆಗಳಲ್ಲಿ ಕೆಲವು ಬಾರಿ ಈ ಮಕ್ಕಳು ಎದುರಿಸುವ ತಾರತಮ್ಯ ಮತ್ತು ಕಳಂಕವು ಅವರ ಆತ್ಮ ವಿಶ್ವಾಸವನ್ನು ಕುಗ್ಗಿಸುತ್ತದೆ. ಇದು ಅನಾಥ ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣವಾಗಿದೆ.
- ಅನಾಥಾಶ್ರಮಗಳಲ್ಲಿ ಕೆಲವು ಮಕ್ಕಳು ಹೆಚ್ಚು ಬೌದ್ಧಿಕವಾಗಿ ಬೆಳೆದಿರುತ್ತಾರೆ. ಅವರು ಶೈಕ್ಷಣಿಕವಾಗಿ ಸಾಮಾಜಿಕವಾಗಿ ಪ್ರತಿಭಾವಂತರಾಗಿರುತ್ತಾರೆ ಅಂತಹ ಪ್ರತಿಭೆಗಳನ್ನು ಗುರುತಿಸುವಲ್ಲಿ ಶಿಕ್ಷಕರು, ನಿರ್ವಾಹಕರು, ಸಿಬ್ಬಂದಿ ವರ್ಗ ವಿಫಲರಾಗುತ್ತಿದ್ದಾರೆ. ಇದರಿಂದ ಪ್ರತಿಭೆಗಳುಳ್ಳ ಅನಾಥ ಮಕ್ಕಳು ಮೂಲೆ ಗುಂಪಾಗುತ್ತಿದ್ದಾರೆ.
- ಎನ್.ಜಿ.ಓ ನಂತಹ ಅಡಿಯಲ್ಲಿ ನಡೆಸಲ್ಪಡುವ ಮಕ್ಕಳ ಅನಾಥಾಶ್ರಮಗಳು ಮಕ್ಕಳಿಗೆ ಕೌಶಲ್ಯತೆಯ ಬಗ್ಗೆ ತರಬೇತಿಯನ್ನು ನೀಡಿ ಅವರಲ್ಲಿ ಸ್ವಾಭಿಮಾನದ ಬದುಕನ್ನು ತುಂಬಿ, ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ. ಆದರೆ ಹೆಚ್ಚಿನ ಕೆಲವು ಖಾಸಗಿ ಆಶ್ರಮಗಳು ಇಂತಹ ಕಾರ್ಯಗಳನ್ನು ಮಾಡದೇ ಅನಾಥ ಮಕ್ಕಳು ಅವಲಂಬಿಯಾಗಿಯೇ

ಉಳಿದುಕೊಳ್ಳಲು ಕಾರಣವಾಗಿದ್ದಾರೆ ಎಂದರೆ ತಪ್ಪಾಗಲಾರದು.

ಹೀಗೆ ಹಲವಾರು ರೀತಿಯ ಶೈಕ್ಷಣಿಕ ಸಮಸ್ಯೆಗಳನ್ನು ಬೆಂಗಳೂರಿನಲ್ಲಿ ಇರುವ ಹಲವಾರು ಮಕ್ಕಳ ಅನಾಥಾಶ್ರಮಗಳಲ್ಲಿನ ಮಕ್ಕಳು ಎದುರಿಸುತ್ತಿರುವುದನ್ನು ನಾವು ಈ ಅಧ್ಯಯನದ ಮೂಲಕ ತಿಳಿದುಕೊಳ್ಳಬಹುದಾಗಿದೆ. ಅನಾಥ ಮಕ್ಕಳು ಎದುರಿಸುತ್ತಿರುವ ಇಂತಹ ಹಲವಾರು ಸಮಸ್ಯೆಗಳಿಗೆ ಪರಿಹಾರ ಅಥವಾ ಸಲಹೆಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

**ಸಲಹೆಗಳು:**

- ನಿರ್ವಾಹಕರು ಅನಾಥಾಶ್ರಮಗಳಲ್ಲಿ ಜೀವಿಸುತ್ತಿರುವ ಮಕ್ಕಳಿಗೆ ಅವರು ಕಲಿಕೆಗಾಗಿ ಹೋಗುವ ಶಾಲೆಗಳನ್ನು ಆದಷ್ಟು ಆಶ್ರಮಕ್ಕೆ ಹತ್ತಿರವಿರುವಂತೆ ನೋಡಿ ಪ್ರವೇಶಗಳನ್ನು ಕೊಡಿಸಬೇಕಾಗಿದೆ.
- ಶೈಕ್ಷಣಿಕವಾಗಿ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಅಂತಹ ಮಕ್ಕಳಿಗೆ ಸರ್ಕಾರದಿಂದ ಉನ್ನತ ಮಟ್ಟದ ಶಿಕ್ಷಣ ಸಿಗುವಂತೆ ಮಾಡಬೇಕು.
- ಬೆಂಗಳೂರಿನ ಕೆಲವು ಖಾಸಗಿ ಮಕ್ಕಳ ಅನಾಥಾಶ್ರಮಗಳಲ್ಲಿ ಮಕ್ಕಳಿಗೆ ಟ್ಯೂಷನ್ ವ್ಯವಸ್ಥೆ ಇಲ್ಲದ ಕಾರಣ ಮಕ್ಕಳಿಗೆ ಉತ್ತಮ ಗುಣಮಟ್ಟದಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಎಲ್ಲಾ ಮಕ್ಕಳ ಅನಾಥಾಶ್ರಮಗಳಲ್ಲಿ ಟ್ಯೂಷನ್ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ.
- ಅನಾಥ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಗೌರವ, ಸನ್ಮಾನ, ಪ್ರಶಸ್ತಿಗಳನ್ನು ನೀಡುವುದರ ಮೂಲಕ ಅವರಲ್ಲಿ ಶೈಕ್ಷಣಿಕವಾಗಿ ಉತ್ತೇಜನ ನೀಡಬೇಕಾಗಿದೆ.
- ಅನಾಥ ಮಕ್ಕಳಿಗೂ ಕೂಡ ಅತ್ಯಾಧುನಿಕ ಅಥವಾ ತಾಂತ್ರಿಕ ಶಿಕ್ಷಣವನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ.
- ಅನಾಥಾಶ್ರಮಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಕರನ್ನು ಹಾಗೂ ಸಿಬ್ಬಂದಿ ವರ್ಗದವರನ್ನು ಆಯ್ಕೆ ಮಾಡುವುದರಿಂದ ಮಕ್ಕಳ ಭವಿಷ್ಯವನ್ನು ಸಹ ಉತ್ತಮ ರೀತಿಯಲ್ಲಿ ರೂಪಿಸಬಹುದಾಗಿದೆ.
- ಅನಾಥ ಮಕ್ಕಳಿಗೂ ಸಹ ಇತರ ಮಕ್ಕಳಂತೆ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳುವುದರ ಮೂಲಕ ಅವರಿಗೆ ಸ್ಫೂರ್ತಿ ತುಂಬುವ ಕೆಲಸವನ್ನು ಮಾಡಬೇಕಾಗಿದೆ.
- ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮಕ್ಕಳ ಅನಾಥಾಶ್ರಮಗಳಿಗೆ ನೀಡುವ ಅನುದಾನವನ್ನು ಯಾವುದೇ ಕಾರಣಕ್ಕೂ ವಿಳಂಬವಾಗದಂತೆ ನೋಡಿಕೊಳ್ಳಬೇಕಾಗಿದೆ.

**ಉಪಸಂಹಾರ:**

ಮಕ್ಕಳ ಅನಾಥಾಶ್ರಮಗಳು ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸುತ್ತವೆ. ಅದರಲ್ಲಿಯೂ ಶೈಕ್ಷಣಿಕವಾಗಿ ಅವರ ಭವಿಷ್ಯ ರೂಪಿಸುವಲ್ಲಿ ಬಹಳ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗಿದೆ. ಕೆಲವು ಅನುದಾನಿತ ಮತ್ತು ಖಾಸಗಿ ಮಕ್ಕಳ ಅನಾಥಾಶ್ರಮಗಳು ಅನಾಥ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಹಲವಾರು ರೀತಿಯ ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಅಧ್ಯಯನದಿಂದ ತಿಳಿದುಬಂದಿರುವುದು ಸಾಪೇಕ್ಷವಾಗಿದೆ. ಆದ್ದರಿಂದ ಈ ಅನಾಥಾಶ್ರಮಗಳು ಕೆಲವೊಂದು ತಿಳಿಸಿರುವ ಪರಿಹಾರಗಳು ಅಥವಾ ಸಲಹೆಗಳನ್ನು ಅನುಸರಿಸುವುದರ ಮೂಲಕ ಅನಾಥ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ದೃಷ್ಟಿ ಹರಿಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಗಂಗಾಧರ ಬಿ.ಎಲ್. ನಿಟ್ಟೂರು, (2018), ಅನಾಥ ಮಕ್ಕಳ ಸ್ವಾವಲಂಬಿ ಬದುಕಿನ ಆಶ್ರಯದಾತೆ ಪ್ರೇಮಾ ನಾಗರಾಜ್, ಬೆಂಗಳೂರು: ಸುದ್ದಿ ಮನೆ.
2. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ, (2016), ಕರ್ನಾಟಕದಲ್ಲಿ ಹಕ್ಕು ಆಧಾರಿತ ಮಕ್ಕಳ ರಕ್ಷಣೆ, ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
3. ವೆಂಕಟೇಶ ಮೂರ್ತಿ ಹೆಚ್.ಎಸ್., (2022), ಮಕ್ಕಳ ಸಾಹಿತ್ಯ ಸುಗ್ಗಿ, ಬೆಂಗಳೂರು: ವಸಂತ ಪ್ರಕಾಶನ.
4. ಮಾಲತಿ ಎ.ಪಿ., (1986), ಮಹಿಳೆ–ಸಮಾಜ ಕಲ್ಯಾಣ, ಮೈಸೂರು: ಮನೋವಿಕಾಸ ಪುಸ್ತಕ ಮಾಲೆ, ಭಾರತ ಕುಟುಂಬ ಯೋಜನಾ ಸಂಘ.
5. ಈರನಗೌಡ ಪಾಟೀಲ, (2017), ಅನಾಥ ಮಕ್ಕಳ ಅಣ್ಣಯ್ಯ, ಮೈಸೂರು: ಸೃಷ್ಟಿ ಪಬ್ಲಿಕೇಶನ್.